ಕಡಿದಿರುವುದನ್ನು ನೋಡಿ 'ಇವರು ಹೀಗೆ ಕಾಡಿನ ಮರಗಳನ್ನು ಕಡಿದು ಹಾಕಿದರೆ ನಮಗೆ ತೊಂದರೆ ತಪ್ಪಿದ್ದಲ್ಲ. ನಾನು ಚಿಕ್ಕವನಿದ್ದಾಗ ನಮ್ಮ ಹಿಂಡು ಬೇರೆಯ ಕಾಡಿನಲ್ಲಿ ವಾಸವಾಗಿತ್ತು. ಅಲ್ಲಿ ಕಾಡನ್ನು ಕಡಿದು ಹಾಕಿದರು. ಆಗ ನಾವೆಲ್ಲ ಆ ಜಾಗವನ್ನು ಬಿಟ್ಟು ಈ ಕಾಡಿಗೆ ಬಂದೆವು. ಇಲ್ಲೂ ಕಾಡನ್ನು ಕಡಿದರೆ ನಾವು ಬೇರೆಯ ಕಾಡನ್ನು ಹುಡುಕಿ ಕೊಂಡು ಹೋಗಬೇಕು' ಎಂದು ಹೇಳಿತ್ತು.

ಇಷ್ಟು ವಿಚಾರವನ್ನು ತಿಳಿಸಿ ಅಂಬಾರಿ ಕಣ್ಣೀರು ಹಾಕುತ್ತಾ, 'ನಾನು ನಿಮ್ಮನ್ನೆಲ್ಲ ಬಿಟ್ಟು ಬೇರೆ ಕಡೆಗೆ ಹೋಗಬೇಕು' ಎಂದು ಅಳಲು ಪ್ರಾರಂಭಮಾಡಿತು. ಪುಟ್ಟಿ ಮತ್ತು ಉಳಿದ ಕಾಡಿನ ಗೆಳೆಯರಿಗೂ ಬಹಳ ದುಃಖವಾಗಿ ಎಲ್ಲರೂ ಅಳಲು ಪ್ರಾರಂಭಿಸಿದರು.

ಸ್ವಲ್ಪ ಸಮಯದಲ್ಲೇ ಪುಟ್ಟಿ ಚೇತರಿಸಿಕೊಂಡು, 'ಅಳಬೇಡಿ, ತಾಳಿ. ಅವರು ಈ ಕಾಡಿನಲ್ಲಿ ಮರಗಳನ್ನು ಕ ಡಿ ಯ ದ ಂ ತೆ ಏನಾದರೂ ಉಪಾಯ ಮಾಡೋಣ' ಎಂದಳು. ಅವಳ ಗೆಳೆಯರಿಗೆ ಆಶ್ಚರ್ಯವಾಯಿತು. ಅಳುವುದನ್ನು ನಿಲ್ಲಿಸಿ 'ನಾವು ಪುಟ್ಟವರು. ನಮ್ಮ ಕೈಯಲ್ಲಿ ಏನು ಮಾಡಲು ಆಗುತ್ತದೆ?' ಎಂದು ಕೇಳಿದವು.



'ಹೌದು, ನಾವು ಸಣ್ಣವರು. ನಮಗೆ ಶಕ್ತಿ ಕಡಿಮೆ. ಆದರೆ, ನಮ್ಮ ಯುಕ್ತಿಯ ಮುಂದೆ ಅವರ ಶಕ್ತಿ ಏನೂ ಅಲ್ಲ. ಸ್ವಲ್ಪ ಯೋಚಿಸೋಣ' ಎಂದಳು. ಎಲ್ಲರೂ 'ಏನು ಉಪಾಯ ಮಾಡುವುದು?' ಎಂದು ಆಲೋಚಿಸತೊಡಗಿದವು.

'ಅವರು ಮರವನ್ನು ಹೇಗೆ ಕಡಿದರು? ಏನಾದರೂ ಉಪಕರಣಗಳನ್ನು ತಂದಿದ್ದರೆ?' ಪುಟ್ಟಿ ಕೇಳಿದಳು.

ಅಂಬಾರಿ, 'ಹೌದು, ಅದು ಜೋರಾಗಿ ಶಬ್ದ ಮಾಡುತ್ತೆ. ಅದು ಮರಕ್ಕೆ ತಾಕಿದ ಕೂಡಲೇ ಮರದಿಂದ ಹುಡಿ ಹಾರಲು ಪ್ರಾರಂಭವಾಗುತ್ತದೆ' ಎಂದಿತು.

ಹಸಿರುಪಕ್ಕೆ ಗಿಣಿಮರಿ 'ಹೌದು, ನಾನೂ ಅದನ್ನು ಮರದ ಮೇಲಿಂದ ನೋಡಿದೆ. ಸ್ವಲ್ಪ ಕತ್ತರಿಸಿ ಅದನ್ನು ಮರದಿಂದ ಹಿಂದಕ್ಕೆ ಎಳೆದಾಗ, ಹತ್ತು ದೊಡ್ಡ ಮರಕುಟಿಗ ಹಕ್ಕಿಗಳು ಒಟ್ಟಿಗೆ ಕುಳಿತು, ಮರವನ್ನು ಕೊರೆದಂತೆ ಕಾಣಿಸುತ್ತಿತ್ತು' ಎಂದು ತಾನು ನೋಡಿದ್ದನ್ನು ಹೇಳಿತು.

ಪುಟ್ಟಿ 'ಓಹೋ, ವಿದ್ಯುತ್ತಿನಿಂದ ತಿರುಗುವ ಚಕ್ರದ ಗರಗಸವನ್ನು ತಂದಿದ್ದಾರೆ' ಎಂದು ಜೋರಾಗಿ ಹೇಳಿದಳು.

'ಏನು ಅದು ಚಕ್ರಾಯುಧವೇ...?' ಎಂದು ಕಾಡಿನ ಗೆಳೆಯರು ಆತಂಕದಿಂದ ಕೇಳಿದರು. ಪುಟ್ಟಿ ತಲೆ ಆಡಿಸಿದಳು.

ಅಷ್ಟರಲ್ಲಿ ಅಂಗದ ಕೋತಿಮರಿ, 'ಅಕ್ಕಾ, ಅದರ ಜೊತೆಗೆ ನಿಮ್ಮ ಮನೆಯಲ್ಲಿ ಹಸಿರು ಬಣ್ಣದ ಒಂದು ಯಂತ್ರ ಇದೆಯಲ್ಲ, ಅದೇ ತರಹದ್ದು ಅವರೂ ತಂದಿದ್ದಾರೆ' ಎಂದು ಸೇರಿಸಿತು. ಪುಟ್ಟಿಗೆ ಅದು ಯಾವುದು ಎಂದು ಗೊತ್ತಾಗಲಿಲ್ಲ; ಅದು ಯಾವುದು ಎನ್ನುವಂತೆ ತನ್ನ ಹೆಬ್ಬೆಟ್ಟನ್ನು ಮೇಲೆತ್ತಿ ಅಂಗದನನ್ನು ಕೇಳಿದಳು.

'ಅದೇ ಅಕ್ಕಾ, ಅವತ್ತು ನಿಮ್ಮ ಮನೆಯಲ್ಲಿ ದೀಪ ಇರಲಿಲ್ಲ. ತಾತ ಆ ಯಂತ್ರದ ಹತ್ತಿರ ಹೋಗಿ ಏನೋ ಮಾಡಿದರು. ಆಗ ಅದು ಡಬ್ ಡಬ್ ಅಂತ ಶಬ್ದ ಮಾಡಿತ್ತು. ನಾವೆಲ್ಲ ಹೆದರಿಕೊಂಡಿದ್ದೆವಲ್ಲ... ಆಮೇಲೆ